

ನಾನು 'ದೇವಾ ನೀನು ಸರ್ವಾಂತರ್ಯಾಮಿ ಅಲ್ಲವೆ, ಜಗತ್ತಿಗೆಲ್ಲ ನೀನೊಬ್ಬನೇ ಒಡೆಯನಲ್ಲವೇ...? ನಿನ್ನ ಅನುಮತಿ ಇಲ್ಲದೆ ಒಂದು ಹುಲ್ಲುಕಡ್ಡಿ ಕೂಡಾ ಕದಲುವುದಿಲ್ಲ' ಎಂದು ಹೇಳುತ್ತಾರೆ ಅಂದೆ. 'ಅದು ನೀವೇ ಅಂದುಕೊಂಡದ್ದು, ಬರೆದುಕೊಂಡದ್ದು, ನಿಮ್ಮಲ್ಲಿಯೇ ಅನೇಕ ದೇವರುಗಳನ್ನು ಸೃಷ್ಟಿಸಿ ನೀವು ಪೂಜಿಸುತ್ತಿಲ್ಲವೇ?' ಅಂದ. ನಾನು ಚಡಪಡಿಸುವುದನ್ನು ಕಂಡು ಮತ್ತೇನಾದರೂ ಕೇಳು ಅಂದ. 'ದೇವಾ ನಮ್ಮ ಭರತಭೂಮಿಯ ಮೇಲೆ ನಿತ್ಯ ಅನ್ನುವಂತೆ ಮಹಿಳೆಯರು ಮಕ್ಕಳ ಮೇಲೆ ಅಮಾನುಷ ಲೈಂಗಿಕ ದೌರ್ಜನ್ಯಗಳಾಗುತ್ತಿವೆ, ಹಾಗೆ ಯೋಚಿಸುವವರನ್ನು, ದೌರ್ಜನ್ಯ ಎಸಗುವವರನ್ನು ಷಂಡರನ್ನಾಗಿ ಮಾಡಿ ಇಂಥ ಅಮಾನುಷ ಕೃತ್ಯಗಳನ್ನು ನಿಲ್ಲಿಸು' ಅಂದೆ. ಅದಕ್ಕೆ ದೇವರು; ಹಾಗೆ ಮಾಡಿದರೆ